
INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 13 | ISSUE - 3 | APRIL - 2023

# ಸಾರ್ಥಕ ಬದುಕು; ಸಂಪಾದಿತ ಕೃತಿಯ ಅವಲೋಕನ

ಡಾ. ಹನುಮಂತಪ್ಪ ಸಂಜೀವಣ್ಣನವರ
ಸಹಾಯಕ ಪ್ರಧ್ಯಾಪಕರು, ಕನ್ನಡ ವಿಭಾಗ, ರಾ.ಚ.ವಿ. ಬೆಳಗಾವಿ.




ಮಾನವ ಜೀವನವು ಹುಟ್ಟಿನಿಂದ ಚಟ್ಟಿನವರೆಗೆ ವಿರಾಮ ರಹಿತವಾಗಿ ಕಾರ್ಯ ಸಾಧನೆ ಮಾಡುತ್ತಾ ಕೊನೆಗೆ ಮುಕ್ತಿ ಪಡೆಯುತ್ತಿದೆಂಬುವುದು ನಂಬಿಕೆ, ಮುಕ್ತಿ ಎಂದರೆ ಆಧ್ಯಾತ್ಮದಲ್ಲಿ ಪ್ರತಿಯೊಬ್ಬರಿಗೂ ದೂರೆಯದ ಸ್ಥಾನವೆಂದೇ ಅನೇಕ ಅನುಭವಿಗಳು ಹೇಳುತ್ತಾರೆ. ಈ ಮಾರ್ಗಕ್ಕೆ ಬದುಕಿನಲ್ಲಿ ಅನೇಕ ಏರಿಳಿತಗಳನ್ನು ದಾಟಿ ಪ್ರತಿ ಸಂದರ್ಭದಲ್ಲಿ ನ್ಯಾಯ ನೀತಿ ಧರ್ಮದಿಂದ ನಡೆದುಕೊಳ್ಳುವುದು ಅವಶ್ಯವಾದದ್ದು. ಕಷ್ಟ–ಸುಖ–ಅಧಿಕಾರ–ಐಶ್ವರ್ಯ–ಶ್ರೇಷ್ಠತೆ ಇದರಲ್ಲಿ ಯಾವುದಾದರೊಂದು ಬಂದರೂ ಅವುಗಳನ್ನು ಸಮನ್ವಯತೆಯಿಂದ ಪಾಲಿಸಿ ಯಾರಿಗೂ ಅನ್ಯಾಯವಾಗದ ಹಾಗೇ ನಡೆಯುವುದೇ ಬದುಕಿನ ಸರ್ವೋತ್ತಮಮಾರ್ಗ. ಸಾಸವಿಯಷ್ಟು ಸುಖಕ್ಕೆ ಸಾಗರದಷ್ಟು ಕಷ್ಟ ನೋಡಾ" ಎಂಬ ಶರಣ ಅಲ್ಲಮನ ವಚನದಂತೆ ಸದ್ಗತಿಯನ್ನು ಕಾಣಲು ಬದುಕಿನಲ್ಲಿ ಕೇವಲ ಸುಖವಷ್ಟೆ ಅಲ್ಲ, ಕಷ್ಟವನ್ನು ಸಹ ಅತ್ಯಂತ ಪ್ರೀತಿ ಮತ್ತು ಆತ್ಮ ವಿಶ್ವಾಸದಿಂದ ಸ್ವಾಗತಿಸಿ ಅದರೊಂದಿಗೆ ಸಂಬಂಧವನ್ನು ಬೆಳೆಸಿಕೊಂಡು ಜೀವನ ಸಾಗುವುದೇ ಮಾದರಿ ಜೀವನವಾಗಿದೆ.

ಹೀಗೆ ಸಮಾಜದಲ್ಲಿ ಇಂತಹ ಸೌಜನ್ಯಯುತ, ಸಮಾನತೆಯ, ಸೌಹಾರ್ಧಯುತ, ಆಡಂಬರಹಿತ, ಸರಳವಾದ ತತ್ವ ಸಿದ್ಧಾಂತದ ಮೂಲಕ ನಿಸ್ವಾರ್ಥಿ ಬದುಕನ್ನು ಸವಿಸಿದ ವ್ಯಕ್ತಿಗಳು ಕಾಲಕಾಲಕ್ಕೆ ಗೋಚರಿಸುತ್ತಾರೆ. ಹೆಚ್ಚಾಗಿರದಿದ್ದರು, ಕೆಲವೋಬ್ಬರು ಭೂಮಿಯ ಮೇಲಿನ ಧ್ರವತಾರೆಗಳಂತೆ ಮಿಂಚುತ್ತಿದ್ದಾರೆ. ಈ ಅಂಶಗಳನ್ನು ಗಮನಿಸಿದಾಗ ಒಂದರ್ಥದಲ್ಲಿ ಮನುಷ್ಯ ನಮ್ಮ ಮಧ್ಯ ಇಲ್ಲದಿದ್ದಾಗಲೂ ಅವನ ಮೌಲ್ಯಯುತ ಜೀವನವು ಇತರರ ಬದುಕಿಗೆ ಮಾರ್ಗವನ್ನು ನೀಡುವುದರಿಂದ ಇಂತಹ ಶ್ರೇಷ್ಠ ವ್ಯಕ್ತಿಗಳ ಬದುಕು ಅಂದಿನಿಂದಲೇ ಆರಂಭವಾಗುವುದೆಂದು ವಾಡಿಕೆಯಾಗಿದೆ, ಯಾಕೆಂದರೆ ಜೀವನದ ನೀತಿ ಧರ್ಮವು ಇತರರಲ್ಲಿ ಉಳಿದಿರದೇ ಇಡಿ ಆತನ ಬದುಕಿನ ಮೌಲ್ಯ ಮತ್ತು ಆದರ್ಶವಾಗಿದೆ. ಆದುದರಿಂದ ಎಷ್ಟು ದಿನ ಬದುಕಿರುತ್ತಾರೆಯೇ ಅದು ಮುಖ್ಯವಲ್ಲ, ಎಷ್ಟು ಜನರಿಗೆ ಹಿತವಾಗಿ, ಮಾನವೀಯತೆ ಹೃದಯದಿಂದ ಬದುಕಿ ಬಾಳಿದರು ಎಂಬುವುದೇ ಅವರ ಜೀವನದ ಸಾರ್ಥಕತೆಯಾಗಿದೆ.

ಇಂತಹ ಮಾದರಿ ಜೀವನ ಸೇವಿಸಿದ ಹೃದಯವಂತರಲ್ಲಿ ನ್ಯಾಯ ಮೂರ್ತಿಗಳಾದ ಡಾ, ಶಿವರಾಜ ಪಾಟೀಲರು ಒಬ್ಬರಾಗಿದ್ದಾರೆ. ಶ್ರೀಯುತರು ೧೯೪೦ ರಲ್ಲಿ ರಾಯಚೂರ ಜಿಲ್ಲೆ ದೇವದುರ್ಗ ತಾಲೂಕಿನ ಮದಕಲ್ಲು ಗ್ರಾಮದ ಶ್ರೀ ವಿರೂಪಣ್ಣಾ ಪಾಟೀಲ ಮತ್ತು ಮಲ್ಲಮ್ಮ ತಾಯಿಯವರ ಪುಣ್ಯ ದಂಪತಿಗಳ ಉದರದಿಂದ ಶ್ರೀ ಶಿವರಾಜ ರವರು ಜನಿಸಿದರು. ತಮ್ಮ ಶಿಕ್ಷಣವನ್ನು ಹುಟ್ಟುರಾದ ಮದಕಲ್ಲಿನಲ್ಲಿ ಪಡೆದು ಹೈದ್ರಾಬಾದ ಕನಾಟಕದ ಪ್ರಸಿದ್ದ ಶಿಕ್ಷಣ ಸಂಸ್ಥೆಯಾದ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಃಖಅ ಪದವಿ ಮುಗಿಸಿ, ನಂತರ ಎಸ್ .ಎಸ್. ಲಾಹೋಟಿ ಕಾಲೇಜಿನಲ್ಲಿ ಕಾನೂನು ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಡೆದು, ವಕೀಲ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು. ಈ ಕ್ಷೇತ್ರದಲ್ಲಿ ಅಪ್ರತಿಮ, ಸಾಧಕರಾಗಿ ಹೊರ ಹೊಮ್ಮಿದರು, ೧೯೯೦ರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಾಧಿಶರಾಗಿ, ೧೯೯೯ರಲ್ಲಿ ಮದ್ರಾಸ್ ಉಚ್ಚನ್ಯಾಯಾಲಯದಲ್ಲಿ ಹಂಗಾಮಿ ನ್ಯಾಯ ಮೂರ್ತಿಗಳಾಗಿ. ೧೯೯೧ರಲ್ಲಿ ರಾಜಸ್ಥಾನದ ನ್ಯಾಯಮೂರ್ತಿಗಳಾಗಿ ದಕ್ಷತೆ ಮತ್ತು ಪ್ರಮಾಣಿಕತೆಯಿಂದ ಸೇವೆಸಲ್ಲಿಸಿ ೨೦೦೦ ನೆಯ ಇಸ್ವಿಯಲ್ಲಿ ಭಾರತದ ಸರ್ವೋಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇಂತಹ ವರ್ಣರಂಜಿತವಾದ ವ್ಯಕ್ತಿತ್ವವನ್ನು ರೂಪಿಸಿಕೊಂಡ ಇವರು ಸ್ವಂತ ಸಾಮರ್ಥ್ಯ ಮತ್ತು ಉತ್ತಮ ವಾಗ್ಮಯತೆಯಿಂದ ದಿವ್ಯಾನುಭವಿಯಾಗಿದ್ದಾರೆ. ಶ್ರೀಯುತರು ನ್ಯಾಯಯುತ ವೃತ್ತಿ ಬದುಕಿನೊಂದಿಗೆ ಸಾಮಾಜಿಕ, ಸಾಹಿತ್ಯಕ, ಸಂಸ್ಕೃತಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡ ವ್ಯಕ್ತಿತ್ವ

ರೂಪಿಸಿಕೊಂಡವರಾಗಿದ್ದಾರೆ. ನಾಯಕತ್ವಗುಣಗಳಿಂದ ಅನೇಕ ಸಭೆ ಸಮಾರಂಭದ ನೇತೃತ್ವವನ್ನು ವಹಿಸಿಕೊಂಡು ಪ್ರಶ್ನಾತೀತ ಯಸಸ್ಸು ಕಂಡಿದ್ದಾರೆ. ಅವರ ಜಾಣ್ಮೆಯನ್ನರಿತು ದೇಶ ವಿದೇಶದ ಸ್ಥಾನಮಾನ, ಸನ್ಮಾನಗಳು ಅವರನ್ನು ಆರಿಸಿಕೊಂಡು ಬಂದಿವೆ.

ಸರಳ, ಸಜ್ಜನ ನ್ಯಾಯಮೂರ್ತಿಗಳಾದ ಇವರು ಅನೇಕ ಸಾಹಿತ್ಯಿಕ ಸಂಸ್ಕೃತಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ನಾಡಿನ ಚಿಂತಕರ ಬಳಗದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ದೆಹಲಿಯ ಕನ್ನಡ ಬಳಗ ಏಪ್ರೀಲ್ ೨೦೦೫ರಲ್ಲಿ ನಡೆದ ೨೩ನೇ ರಾಷ್ಟ್ರೀಯ ಕನ್ನಡ ಸಮ್ಮೇಳನಕ್ಕೆ ಹಾಗೂ ೨೦೦೬ರಲ್ಲಿ ಮುಂಬೈನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತೀಕ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದು ಇವರ ಹಿರಿಮೆಯಾಗಿದೆ. ಹಾಗೂ ಮಾರ್ಚ್ ೨–೨೦೧೦ ರಂದು ನಡೆದ ರಾಯಚೂರು ಜಿಲ್ಲಾ ೭ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾದ್ಯಕ್ಷರಾಗಿ ಆಯ್ಕೆಯಾಗಿದ್ದರು. ಇಂಥ ಸ್ಥಾನಗಳನ್ನು ಪಡೆಯುವುದರೊಂದಿಗೆ ಅವರು ಸಾಹಿತ್ಯ ಲೋಕದಲ್ಲಿ ತಮ್ಮನ್ನು ಗುರುತಿಸಿಕೊಂಡ ಬಗೆಯನ್ನು ಸಾರುತ್ತವೆ.

ಶ್ರೀಯುತರು ಅನೇಕ ಕಷ್ಟಕರ ಹುದ್ದೆಗಳನ್ನು ನಿಭಾಯಿಸಿದ ಚತುರರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿ ಹಂಗಾಮಿ ಅಧ್ಯಕ್ಷರಾಗಿ ಕರ್ನಾಟಕ ಲೋಕಾಯುಕ್ತರಾಗಿ, ಮುಂತಾದ ಕಾನೂನಾತ್ಮಕ ಸಲಹೆಗಳ ಹುದ್ದೆಯಲ್ಲಿ ಸೇವೆ ಸಲ್ಲಿಸಿ ಯಸಸ್ವಿಯಾದರು. ಶ್ರೀಯುತರು ಕನ್ನಡ ಮತ್ತು ಇಂಗ್ಲೀಷ ಸಾಹಿತಕ್ಕೆ ಅನೇಕ ಕೃತಿಗಳ ಕೊಡುಗೆ ನೀಡಿದ್ದಾರೆ. ಅನುಭವದ ನುಡಿಗಳ" ಮುಂಜಾವಿಗೊಂದು ನುಡಿಕಿರಣ (ತಿಠಡಿಢ ಠಜಿ ಥಿಜಊಟ) ಎಂಬ ಅನನ್ಯ ಕೃತಿಗಳು ಮೂಡಿಬಂದಿವೆ..

ಇವರ ಸಾಧನೆಗೆ ಅನೇಕ ಗೌರವಗಳು ದೊರತಿವೆ. ಗುಲಬರ್ಗಾ ವಿಶ್ವ ವಿದ್ಯಾಲಯದಿಂದ ಗೌರವ ಡಾಕ್ಟರೇಟ್, ೨೦೦೫ ರಲ್ಲಿ ಕಾನೂನು ದಿನಾಚಾರಣೆ ಪ್ರಶಸ್ತಿ, ೨೦೦೦ ರಲ್ಲಿ ನ್ಯಾಯ ಪ್ರಶಸ್ತಿ, ೨೦೦೯ರಲ್ಲಿ ಪ ಗು ಹಳಕಟ್ಟಿ ಪ್ರಶಸ್ತಿ, ೨೦೦೨ರಲ್ಲಿ ಕಾರ್ಯಕ ರತ್ನ ಪ್ರಶಸ್ತಿ, ಹಾಗೂ ಬಸವಶ್ರೀ ವಿಶ್ವ ಮಾನವ ಪ್ರಶಸ್ತಿ ಗೌರವಗಳು ದೊರತಿವೆ. ಇಂಥಹ ವ್ಯಕ್ತಿಗಳ ಬದುಕಿಗೆ ಬೆಲೆಕಟ್ಟಲು ಸಾಧ್ಯವಿಲ್ಲ, ಹೀಗಾಗಿ ನಮ್ಮ ಸಂಸ್ಕೃತಿಯಲ್ಲಿ ಹಿರಿಯರಿಗೂ ಮತ್ತು ಸಾಧಕರಿಗೆ ಗೌರವ ಸಮರ್ಪಣೆಯು ಪರಂಪರೆಯಲ್ಲಿ ಗೋಚರವಾಗುತ್ತವೆ. ಇಂಥಹ ಬೆರಳಣಿಕೆಯ ಶ್ರೇಷ್ಠಯುತರಿಗೆ ಗೌರವ ಆದರಗಳನ್ನು ಬಯಸುವುದು ಇಂದಿಗೂ ಆದ್ಯವಾದದ್ದಾಗಿದೆ. ಈ ಸಾಲಿಗೆ ಸೇರುವ ಮಹನೀಯರಲ್ಲಿ ಸಹಕಾರದ ನ್ಯಾಯಮೂರ್ತಿಗಳಾದ ಶಿವರಾಜ ಪಾಟೀಲರು ಒಬ್ಬರಾಗಿದ್ದಾರೆ. ಇವರು ಬದಕು, ಬರಹ ಮತ್ತು ಆದರ್ಶದ ಜೀವನವನ್ನು ಕುರಿತು ಡಾ, ಅಮರೇಶ ಯಾತಗಲ್ ರವರು "ಸಾರ್ಥಕ ಬದುಕು" ಎಂಬ ಎರಡು ಸಂಪುಟಗಳ ಬೃಹತ್ ಹೊತ್ತಿಗೆಗಳನ್ನು ಸಂಪಾದಿಸಿ ಕನ್ನಡ ಸಾಹಿತ್ಯದ, ಅಭಿನಂದನಾ ಕ್ಷೇತ್ರಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ.

ಮೊದಲನೇಯ ಸಂಪುಟದಲ್ಲಿ ನಾಡಿನ ಪ್ರಸಿದ್ದ ದಾರ್ಮಿಕ ಗುರುಗಳಾಗಿರುವ ಹನ್ನೇರಡು ಸ್ವಾಮಿಜಿಯವರ ಆಶೀರ್ವಚನಗಳಿಗಳಿವೆ. ಇವುಗಳೊಂದಿಗೆ ಅನೇಕ ಬರಹಗಾರರಿಂದ, ನಿರೂಪಿತಗೊಂಡಿರುವ ಎಪ್ಪತ್ತೂರು ಶರಣರ ಆದರ್ಶ ಮತ್ತು ಮೌಲ್ಯಯುತ ತತ್ವ ಸಿದ್ದಾಂತಗಳ ಕುರಿತು ಲೇಖನಗಳು ಮೂಡಿಬಂದಿವೆ ಸುಮಾರ ೭೪೮ ಪುಟಗಳ ಬೃಹತ್ ಹೊತ್ತಿಗೆ ಇದಾಗಿದೆ.

ಎರಡನೇ ಸಂಪುಟವು ಎಪ್ಪತ್ತನಾಲ್ಕು ಶರಣರ ಸಾಹಿತ್ಯವನ್ನೊಳಗೊಂಡು ಆದರ್ಶ ಪುರುಷ ಶಿವರಾಜ ಪಾಟೀಲರ ತುಂಬು ಜೀವನದ ನಿಧಿಯನ್ನು ಹೊತ್ತುನಿಂತು ಸಹೃದಯರನ್ನು ಆಕರ್ಶಿಸುವಂತಿವೆ, ಇವರ ಕುರಿತು ೩೦ ಉಲ್ಲೇಖನಗಳು ನಾಡಿನ ಪ್ರಸಿದ್ದ ಸಾಹಿತಿಗಳಿಂದ ವಿಮರ್ಶಾತ್ಮಕವಾಗಿ ರಚನೆಗೊಂಡಿವೆ, ಸುಮಾರು ೯೯೬ಪುಟಗಳ ಹೊತ್ತಿಗೆ ಇದಾಗಿದೆ.

ಯಾವುದೇ ಕೃತಿಯು ಆಯಾ ಕಾಲದ ಜನ ಜೀವನ ವ್ಯವಸ್ಥೆಯ ಸಮಸ್ಯೆಗಳನ್ನು, ಮೌಲ್ಯಗಳನ್ನು ಎತ್ತಿ ತೊರಿಸುವುದರೊಂದಿಗೆ, ಪರಿಹಾರ ಮಾರ್ಗೋಪಾಯಗಳನ್ನು ನೀಡುವಲ್ಲಿ ಸಹಕರಿಸುತ್ತವೆ. ಅದರಂತೆ ವ್ಯಕ್ತಿಯೊಬ್ಬರ ಬದುಕಿಗೆ ಸಂಬಂಧಿಸಿದ ಅಭಿನಂದನಾ ಗ್ರಂಥವು ಪ್ರಸ್ತುತವೆ? ಸಮಾಜಕ್ಕೆ ಅದರ ಪ್ರಯೋಜನವೇನು? ಇವುಗಳ ಪರಿಚಯಿಸುವ ಅಗತ್ಯ ವಿದಿಯೇ? ಪರಿಚಯಿಸುವ ಮುಂದಿನ ಪೀಳಿಗೆಯು ಇದರ ಅಂಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆದರ್ಶ ಮೌಲ್ಯಗಳ ಸಂದೇಶಗಳನ್ನು ಪಾಲಿಸಿ ಜೀವನವನ್ನು ರೂಪಿಸಿಕೊಳ್ಳುವವರೆ? ಎಂಬ ಇತ್ಯಾದಿ ಪ್ರಶ್ನೆಗಳನ್ನೆಟ್ಟುಕೊಂಡು ಚರ್ಚಿಸುವುದಾದರೆ ಇದಕ್ಕೆ ಉತ್ತರವಾಗಿ, ಸಾಹಿತ್ಯ ಸಮಾಜದ ಪ್ರತಿಬಿಂಬವೆಂದು ಹೇಳುತ್ತಾರೆ. ಸಾಹಿತ್ಯವು ಸಾಮಾಜಿಕ ಬದಲಾವಣೆಗೆ ಪ್ರಮುಖ ಪಾತ್ರವಹಿಸುತ್ತದೆ. ಲೋಕದಲ್ಲಿ ನ್ಯಾಯ–ನೀತಿ–ಧರ್ಮ ಮೌಲ್ಯಗಳು ಬೇರೂರುವಲ್ಲಿ ಸಾಹಿತ್ಯ ಕೃತಿಗಳು ಪೂರಕವಾಗುತ್ತವೆ. ಹಾಗಾಗಿ ಆದರ್ಶ ವ್ಯಕ್ತಿಗಳ ನೀತಿ, ಬದುಕಿನ ಮೌಲ್ಯಗಳೆಂಬ ಸರಕನ್ನು ಮುಂದಿನ ಪೀಳಿಗೆಗೆ ಸಾಗಿಸಲೇ ಬೇಕಾಗುತ್ತದೆ. ಇದಕ್ಕಾಗಿಯೇ ಕೃತಿಯಲ್ಲಿ ಶುಭ ಸಂದೇಶ ನೀಡಿದ ಜಗದ್ಗುರು ಶ್ರೀ ಶಿವರಾತ್ರಿ ದೇಶಕೇಂದ್ರ ಮಹಾಸ್ವಾಮಿಗಳು ಶ್ರೀ ಶಿವರಾಜ ಪಾಟೀಲರು ಸರಳತೆ, ದಕ್ಷತೆ, ಗಾಂಭಿರ್ಯ ಹಾಗೂ ವಿನಯವಂತಿಕೆಗಳ ಮೂರ್ತರೂಪರಾಗಿದ್ದಾರೆ. ತಮ್ಮ ಸಹಜ ಸ್ವಭಾವಿತನದಿಂದ ಸಾತ್ವಿಕ ನಡೆ–ನುಡಿಗಳಿಂದ ನಾಡಿನ ಸಾಂಸ್ಕೃತಿಕ ಸಂಪತ್ತಾಗಿದ್ದಾರೆ. ಕಿರಿಯರ ಪಾಲಿನ ದಾರಿ ದೀಪವಾಗಿದ್ದಾರೆ. ಅವರೊಬ್ಬ ದಣಿವರಿಯದ ಕ್ರೀಯಾಶೀಲ ಧೀರ ಚೇತನ ವೆಂದು ಹಾರೈಸುತ್ತಾರೆ. "ನ್ಯಾಯಾಂಗ ವೃತ್ತಿ ಕೇವಲ ಸರಕಾರಿ ನೌಕರಿಲ್ಲ ಸಮಾಜದಲ್ಲಿ ದಾರಿ ತಪ್ಪಿದವರಿಗೆ ಸೂಕ್ತವಾದ ಮಾರ್ಗದರ್ಶನ, ಆಪ್ತ ಸಲಹೆ, ಸಮಸ್ಯಗಳ ಸುಳಿಗೆ ಸಿಲಿಕಿಕೊಂಡವರಿಗೆ ಪರಿಹಾರ, ಅಲ್ಲದೆ ದುಷ್ಠ ಶಕ್ತಿಗಳ ವಿರುದ ಹೋರಾಡುವವರಿಗೆ ನೈತಿಕ ಬೆಂಬಲ ನೀಡುವುದಾಗಿದೆ. ಹೀಗೆ ಬದುಕಿನಲ್ಲಿ ಉತ್ಸಾಹ ತುಂಬಲು ಈ ವೃತ್ತಿ ಸಹಾಯಕವಾಗಿದೆ ಓರ್ವ ನ್ಯಾಯ ಮೂರ್ತಿಯ ಬದುಕಿನ ಸಾರ್ಥಕತೆಗೆ ಜ್ಞಾನದಾಹ ಸಮಾಜಿಕ ಕಳಕಳಿ ಮತ್ತು ಪಾರದರ್ಶಕತೆಯ ಜೀವನ ಅವಶ್ಯಕವೆಂದು ಅವರ ವೃತ್ತಿಯ ಬಗೆಗೆ ಇದ್ದಂತ ಶ್ರದ್ದೆಯು, ಇನ್ನಿತರ ನೌಕರರಿಗೆ ಮಾದರಿಯಾಗಿದೆ. ಅಪರಾಧ ಮುಕ್ತ ಸಮಾಜ ನಿರ್ಮಿಸುವಲ್ಲಿ ಅವರ ಮಾರ್ಗದರ್ಶನವು ಅಷ್ಟೇ ಶ್ರೇಷ್ಠತೆಯನ್ನು ಪಡೆಯುತ್ತವೆ.

ಶರಣ ತತ್ವ ಪರಿಪಾಲಕರಾದ ಇವರು ಸತ್ಯ–ಶುದ್ಧ ಕಾಯಕ ಸಿದ್ಧಾಂತವನ್ನು ಅಳವಡಿಸಿಕೊಂಡು, ಆಯ್ದಕ್ಕಿ ಮಾರಯ್ಯನವರು ಹೇಳಿದಂತೆ "ಕಾಯಕವೇ ಕೈಲಾಸ" ಎಂಬ ಮಾತಿನಂತೆ ಪ್ರತಿಯೊಬ್ಬರಿಗೂ ಅವರದೇ ಆದ ವೃತ್ತಿ ಧರ್ಮವೇ ಶ್ರೇಷ್ಠ ಇದರಲ್ಲಿ ಶ್ರೇಷ್ಠವಾಗಲಿ, ಕನಿಷ್ಠವಾಗಲಿ ಇಲ್ಲದೆ ಇಲ್ಲಿ, ಸಮಾನ ಸಮಾಜದ ಹರಿಕಾರರಾದ ಶಿವಶರಣರು ನೀಡಿದ ಸಂದೇಶದಂತೆ ನ್ಯಾಯ ಮೂರ್ತಿಗಳು ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಇಂಥ ಅಂಶಗಳು ಅವರ ಬದುಕಿನ ಅನೇಕ ಸಂದರ್ಭಗಳಲ್ಲಿ ಕಾಣಬಹುದಾಗಿದೆ.

ಅಂತಸ್ತಿಗಿಂತ ಆಯುಷ್ಯ ದೂಡ್ಡದು, ಆಯುಷ್ಯಕ್ಕಿಂತ ಅರ್ಥಪೂರ್ಣ ಬದುಕು ದೊಡ್ಡದು, ಅಲ್ಪ ಬದುಕಿದರು ಜಗತ್ತು ಕಲ್ಪಿಸುವಂಥ ರೀತಿಯಲ್ಲಿ ಬದುಕಬೇಕು, ಎಂಬ ಬದುಕಿನ ಸಾರ್ಥಕತೆ ಅರಿತು ದೇಶ ಕಂಡ ಶ್ರೇಷ್ಠ ನ್ಯಾಯಾಧೀಶರು ಎಂದು ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಇವರ ಅರ್ಥಪೂರ್ಣವಾದ ಜೀವನವನ್ನು ಕುರಿತು ವಿವರಿಸುತ್ತಾರೆ.

ಶ್ರೇಷ್ಠವೆಂಬುವುದಕ್ಕೆ ಇರಬೇಕಾದ ಎಲ್ಲಾ ಅರ್ಹತೆಗಳು ಪಾಟೀಲರಲ್ಲಿ ಅನೇಕ ಮಹನೀಯರು ಗುರುತ್ತಿಸುತ್ತಾರೆ. ಅದುದರಿಂದ ಶ್ರೀಯುತರ ಜೀವನದ ಸಂದೇಶ ಆದರ್ಶಗಳನ್ನು ಲಿಖಿತವಾಗಿ ಉಳಿಸುವಂತಹ ಪ್ರಯತ್ನವನ್ನು ಮುಂದುವರಿಸುವ ಅಗತ್ಯತೆ ಇದೆ. ಇದರಿಂದ ದೂರಕುವ ಪ್ರಯೋಜನೆಗಳು ಅಸಂಖ್ಯಾತ. "ಸಾರ್ಥಕ ಬದುಕು" ಎಂಬ ಎರಡು ಸಂಪುಟಗಳಲ್ಲಿ ಸಂದರ್ಭೂಚಿತವಾಗಿ ಅನೇಕ ನಿದರ್ಶನಗಳನ್ನು, ಉದಾರಹಣೆಯನ್ನು ಕಾಣಬಹುದಾಗಿದೆ. ನ್ಯಾಯ ಮೂರ್ತಿಗಳನ್ನು ಪರಿಚಯಿಸುವಾಗ ಶಾಸನದಲ್ಲಿ ಮೂಡಿಬಂದ ಸ್ತೊತ್ರ, ನೀತಿ, ಲೋಕ ಸಂದೇಶ, ವಚನಸಾಹಿತ್ಯದಲ್ಲಿ ಅಡಕಗೊಂಡ ಸ್ಪೂರ್ತಿ ಮತ್ತು ನೀತಿಸಾರ ಬೋಧನೆಗಳನ್ನು ಹಾಗೂ ಹಳಗನ್ನಡ ಕೃತಿಗಳ ಮೂಲಕ ಉಲ್ಲೇಖಗೊಂಡ ಪದ್ಯದ ನಿದರ್ಶನಗಳು ಸಾಕಷ್ಟು ಕಡೆಗಳಲ್ಲಿ ಬಹುತೇಕ ಲೇಖನಗಳಲ್ಲಿ ಉಲೇಖಗೊಂಡಿವೆ.

ಹಿರಿಯ ಲೇಖಕರು ನಿಕಟವರ್ತಿಗಳು ಇವರನ್ನು ಕಂಡಂತೆ ತಮ್ಮ ಅನುಭವದ ಲಹರಿಯನ್ನು ಹಂಚಿಕೊಂಡಿದ್ದಾರೆ. ಅವರಲ್ಲಿ ಅನೇಕರು ಅವರ ಶಿಸ್ತು ಭದ್ದ ಜೀವನ ಪ್ರಮಾಣಿಕತೆ, ಮಾನವೀಯತೆ, ಕರುಣೆ ಅನುಭವ ಸರಳ, ಸಜನಕೆ, ಶ್ರೇಷ್ಠ ವಿಚಾರ ವಂತಿಕೆಯನ್ನು ಉಲ್ಲೇಖಿಸಿ ವೈಯಕ್ತಿಕ ಬದುಕಿನ ನಡುವಳಿಕೆಯನ್ನು ವಿವರಿಸುತ್ತಾರೆ.

ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ಅವರ ಪ್ರಥಮ ಕಕ್ಷಿದಾರನಾದ ಅಮಂತ್ಯಪ್ಪ ಚಿಂಚುಳ್ಳಿ ಇವರನ್ನು ಪ್ರತಿಕ್ಷಣವು ಜೀವನದಲ್ಲಿ ನನಪಿಸುತ್ತಾ ಹೀಗೆ ಹೇಳುತ್ತಾರೆ, "ಶ್ರೀಮಂತ ಗ್ರಾಹಕ ಹಣವನ್ನು ಕೊಡುತ್ತಾನೆ. ಬಡ ಗ್ರಾಹಕರು ಆರ್ಶಿವಾದ ಮಾಡುತ್ತಾರೆ. ಎಂಬ ವಿಚಾರದೊಂದಿಗೆ ಯಾರಿಗೂ ತಾರತಮ್ಯಗಳಿಂದ ನಡೆದುಕೊಳ್ಳದ ಸಂದೇಶವನ್ನು ವ್ಯಕ್ತಪಡಿಸುತ್ತಾರೆ. ಬಡವರೇ ಇರಲಿ ಶ್ರೀಮಂತರೇ ಇರಲಿ ಯಾವತ್ತು ಹಣಕ್ಕೆ ಮಾನ್ಯತೆ ನೀಡಿದವರಲ್ಲ, ಕಾನೂನಿನ ಪ್ರಕಾರ ನ್ಯಾಯ ಒದಗಿಸಿಕೊಡುವ ಪ್ರಯತ್ನವು ಅವರ ಜೀವನದುದ್ದಕ್ಕೂ ನಡೆದು ಬಂದ ಪ್ರಮಾಣಿಕ ಪ್ರಯತ್ನವಾಗಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ ಬೆಳೆದು ನಿಂತ ವ್ಯಕ್ತಿಗಳನ್ನು ಮಾತನಾಡಿಸಲಿಕ್ಕೆ ಅರ್ಜಿಯನ್ನು ಕೊಟ್ಟು ಕಾಯಬೇಕಾಗುತ್ತದೆ. ಆದರೆ ನ್ಯಾಯಮೂರ್ತಿಗಳು ಇದಕ್ಕೆ ಹೊರತಾಗಿದ್ದಾರೆ. ಕಕ್ಷಿದಾರರು ಒಂದುಂದು ಸಾರೆ ತಾವು ಈ ಹಿಂದೆ ಹ್ಯಾಗಿದ್ದರೋ ಹಾಗೆಯೇ ಇಂದಿಗೂ ಇದ್ದೀರಿ ಎಂದು ಕೇಳಿದರೆ, ನ್ಯಾಯ ಮೂರ್ತಿಗಳು ಇದಕ್ಕೆ ಕಾರಣ ಗೊತ್ತೇನು ಯಜಮಾನರೇ, ಇದಕ್ಕೆ ಕಾರಣ ತಂದೆ–ತಾಯಿ, ಸಂಬಂದಿಗಳು, ಸ್ನೇಹಿತರು ವಿದ್ಯ ಕಲಿಸಿದ ಎಲ್ಲಾ ಗುರುಗಳು, ಮತ್ತು ನೀವೆಲ್ಲರೂ ಈ ಇಳೆಯಲ್ಲಿ ಬಿತ್ತಿ ಬೇಳೆದಿದ್ದಿರಿ, ತಮ್ಮ ಈ ಋಣ ಭಾರ ತೀರಿಸುವಂತಹದ್ದಲ್ಲಿ ಯಜಮಾನರೇ ಎಂದು ಆತ್ಮೀಯತೆಯಿಂದ ಕುಶಲೊಪರಿ ವಿಚಾರಿಸುತ್ತಾರೆ. ಇವರ ಸೌಜನ್ಯದ ಮುಂದೆ ಕನ್ನಡದ ಜಾನಪದ ಕವಿ ಸರ್ವಜ್ಞನು ತಕ್ಷಣ ನೆನಪಿಗೆ ಬರುತ್ತಾನೆ. "ಸರ್ವಜ್ಞನೆಂಬುವನು ಗರ್ವದಿಂದಾವನಲ್ಲ, ಸರ್ವರೊಳಗೊಂದು ನುಡಿಗಳಿತು ವಿದ್ಯೆದ ಪರ್ವತವೇ ಆದ ಸರ್ವಜ್ಞ" ಎಂಬ ಸರ್ವಜ್ಞನ ನಿರಂಕಾರದ ತತ್ವ, ಸರಳತೆ, ಸಜ್ಜನಕೆಯ ವ್ಯಕ್ತಿತ್ವ ಅವರಲ್ಲಿ ಮಡುಗಟ್ಟಿ ನಿಂತಿದೆ, ಅಪಾರ ಜ್ಞಾನ ಪಾಂಡಿತ್ಯ ಸಂಪಾದಿಸಿದರೂ, ಸಹ ಪ್ರಾಮಾಣಿಕ ಸೌಜನ್ಯವು ಇವರನ್ನು ಉನ್ನತ ಸ್ಥಾನಕ್ಕೇರಿಸಿದೆ.

ಇಂತಹ ನ್ಯಾಯಮೂರ್ತಿಗಳನ್ನು ಕುರಿತು ಸಾರ್ಥಕ ಬದುಕು ಎಂಬ ಎರಡು ಸಂಪುಟಗಳನ್ನು ಅವರ ಎಂಬತ್ತರ ಸಂಭ್ರಮದ ನೆನಪಿಗಾಗಿ ವಚನಗಳು, ವಚನಕಾರರು ಸಂಶೊಧನಾತ್ಮಕ ದೃಷ್ಠಿಕೊನ ಎಂಬ ವಿಷಯವನ್ನುಟ್ಟುಕೊಂಡು ನಾಡಿನ ಇತಿಹಾಸ ತಜ್ಞರು ಸಾಹಿತಿಗಳು ಆದ ಡಾ, ಅಮರೇಶ ಯಾತಗಲ್ ರವರು ಅಂತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆ, ಪರಿಶ್ರಮದಿಂದ ಈ ಸಂಪುಟಗಳನ್ನು ಸಂಪಾದಿಸಿದ್ದಾರೆ. ಈ ಶ್ರೇಷ್ಠ ಕಾರ್ಯಕ್ಕೆ ಕರ್ನಾಟಕದ ಅನೇಕ ಹಿರಿಯ ಮತ್ತು ಕಿರಿಯ ಲೇಖಕರಿಗೆ ಅವಕಾಶವನ್ನು ನೀಡಿ ಅವರ ವಿಚಾರವನ್ನು ಹಂಚಿಕೊಳ್ಳಲು ಅವಕಾಶ ನೀಡಿರುವುದು ಅಭಿನಂದನಾರ್ಹವಾಗಿದೆ.

ಈ ಸಂಪಾದನಾ ಕೃತಿಗಳು ನಾಡಿನ ಅನೇಕ ಸಾಹಿತಿಗಳ ಮತ್ತು ಓದುಗರ ಪ್ರಶಂಸೆಗೆ ಪಾತ್ರವಾಗಿವೆ. ವಚನಗಳು ವಚನಕಾರರ ವಿಷಯವನ್ನು ತಿಳಿಯಬೇಕಾದರೆ ಸಂಶೋಧಕರಿಗೂ, ಹಾಗೂ ಸಹೃದಯರಿಗೂ ಈ ಕೃತಿಗಳನ್ನು ಗಮನಿಸಬೇಕಾದ ಅನಿವಾರ್ಯ ಇದೆ. ಇವುಗಳು ಮುಂದಿನ ಸಂಶೋಧನಾ ಕ್ಷೇತ್ರಕ್ಕೆ ಪ್ರಮುಖ ಆಕರ ಸಾಮಗ್ರಿಗಳಾಗಿ ರರಾಜಿಸುತ್ತಲಿವೆ.

ಕನ್ನಡ ಸಾಹಿತ್ಯದ ಅಭಿನಂದನಾ ಕ್ಷೇತ್ರದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಈ ಕೃತಿಗಳು ಹೊಸ ಸಂಚಲನವನ್ನು ಸೃಷ್ಠಿಸಿವೆ. ಎಂದರೆ ಅತಿಶಯೋಕ್ತಿಯೇನಲ್ಲ ಕಾರಣ ಇಷ್ಟೇ, ಈ ಕೃತಿಗಳು ಮೌಲ್ಯಯುತ ಅಂಶಗಳನ್ನು, ಸಂಶೋಧನೆಯ ಜ್ಞಾನವನ್ನು ವಿಚಾರವನ್ನು, ಹೊತ್ತು ನಿಂತಿವೆ. ಹಾಗಾಗಿ ಮುಂದಿನ ಬರಹಗಾರರಿಗೆ ಸಾಹಿತಿಗಳಿಗೆ ಇವುಗಳ ಅರಿವಿನ ಮಹತ್ವವು ಅತ್ಯಂತ ಅವಶ್ಯಕವಾಗಿದೆ.

VOLUME - 13 | ISSUE - 3 | APRIL - 2023

ಈ ಕೃತಿಗಳ ಮೌಲ್ಯವನ್ನು ಗುರುತಿಸಿದ ವಿಚಾರವಂತ ವಲಯವು ಈಗಾಗಲೇ ಅನೇಕ ಪ್ರಶಸ್ತಿಗಳಿಗೆ ಆಯ್ಕೆ ಮಾಡಿದೆ. ಕರ್ನಾಟಕ ಸರಕಾರವು ನೀಡಲ್ಪಡುವ ಪ್ರಶಸ್ತಿಯನ್ನು ಪಡೆದುಕೊಂಡು ಅದ್ಭುತ ಕೃತಿಗಳಾಗಿ ಹೊರ ಹೊಮ್ಮಿವೆ. ಹಾಗೇಯೇ ಬೆಳ್ಳಿ ಸಂಬ್ರಮ ಪುಸ್ತಕ ಪ್ರಶಸ್ತಿಯನ್ನು ಪಡೆದು ತಮ್ಮ ಹಿರಿಮೆ ಗರಮೇಯನ್ನು ಹೆಚ್ಚಿಸಿಕೊಂಡಿವೆ. ಇದರಿಂದ ಸಾಹಿತ್ಯ, ಮತ್ತು ವಿದ್ವತ್‌ವಲಯದಲ್ಲಿ ಈ ಕೃತಿಗಳ ಮಾನ್ಯತೆಯು ಇನ್ನೂ ಎತ್ತರಕ್ಕೆ ಬೇಳೆಯುತ್ತೇವೆ ಎಂಬುದರಲ್ಲಿ ಅನುಮಾನವೇ ಇಲ್ಲ.